# ಕೆಪಿಎಸ್‌ಸಿ: ಮುಸುಕಿನ ಗುದ್ದಾಟ

## ಕಾರ್ಯದರ್ಶಿ ವರ್ತನೆಗೆ ಅಧ್ಯಕ್ಷ, ಸದಸ್ಯರ ಆಕ್ಷೇಪ • ಸಿಎಸ್‌ಗೆ ದೂರು

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ



**ನೇಮಕಾತಿ ಪ್ರಕ್ರಿಯೆಗಳಲ್ಲಿ ಅಭ್ಯರ್ಥಿಗಳಲ್ಲಿ ವಿಶ್ವಾಸ ಮೂಡಿಸಲು ಮತ್ತು ಅವರ ಒಳಿತಿಗೆ ಪೂರಕವಾಗಿ ನಾನು ಕರ್ತವ್ಯನಿರ್ವಹಿಸುತ್ತಿದ್ದೇನೆ.**

**ಸುರಳ್ಕರ್ ವಿಕಾಸ್ ಕಿಶೋರ್**
ಕಾರ್ಯದರ್ಶಿ, ಕೆಪಿಎಸ್‌ಸಿ



**ಇದು ಆಯೋಗದ ಆಂತರಿಕ ವಿಷಯ. ಆಯೋಗದ ವಿಷಯಗಳನ್ನು ಮಾಧ್ಯಮಕ್ಕೆ ಕೊಡುವುದಾಗಲಿ, ನೀವು ಕೇಳುವುದಾಗಲಿ ಸರಿ ಇರಲ್ಲ.**

**ಶಿವಶಂಕರಪ್ಪ ಎಸ್. ಸಾಹುಕಾರ್**
ಅಧ್ಯಕ್ಷ, ಕೆಪಿಎಸ್‌ಸಿ

ಬೆಂಗಳೂರು: ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿ, ಸಂದರ್ಶನ, ಆಯ್ಕೆ ಪಟ್ಟಿ ಬಿಡುಗಡೆ ಮತ್ತಿತರ ವಿಷಯಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಮತ್ತು ಆಯೋಗದ ಅಧ್ಯಕ್ಷ, ಸದಸ್ಯರ ಮಧ್ಯೆ ಹಲವು ದಿನಗಳಿಂದ ನಡೆಯುತ್ತಿದ್ದ ಮುಸುಕಿನ ಗುದ್ದಾಟ ಇದೀಗ ರಾಜ್ಯ ಸರ್ಕಾರದ ಅಂಗಳ ತಲುಪಿದೆ.

'ಕಾರ್ಯದರ್ಶಿ ತಾವೇ ಆಯೋಗ ಎಂಬಂತೆ ಕಾರ್ಯ-ನಿರ್ವಹಿಸುತ್ತಿದ್ದಾರೆ' ಎಂಬ ಆರೋಪ ಹೊರಿಸಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಸದಸ್ಯರು ಮಾರ್ಚ್ 28ರಂದು 49 ಪುಟಗಳ ಪತ್ರ ಬರೆದಿದ್ದಾರೆ. ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಒಂಬತ್ತು ಸದಸ್ಯರು ಪತ್ರಕ್ಕೆ ಸಹಿ ಹಾಕಿದ್ದಾರೆ. ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ ಮತ್ತು ಪ್ರೊ. ರಂಗರಾಜ ಸಹಿ ಹಾಕಿಲ್ಲ. ರಂಗರಾಜ ಅವರು ಅನಾರೋಗ್ಯ ಕಾರಣದಿಂದ ಹಲವು ತಿಂಗಳುಗಳಿಂದ ಆಯೋಗದ ಸಭೆಗಳಿಗೆ ಹಾಜರಾಗಿಲ್ಲ.

ಅಲ್ಲದೆ, ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿದ ಅಧ್ಯಕ್ಷ ಮತ್ತು ಸದಸ್ಯರು, ನೇಮಕಾತಿ ಪ್ರಕ್ರಿಯೆ ಕುರಿತಂತೆ ಅಭ್ಯರ್ಥಿಗಳ ಜೊತೆ ಯೂಟ್ಯೂಬ್ ಸಂವಹನ, ಟ್ವೀಟ್, ಆಯೋಗದ ಅನುಮೋದನೆ ಪಡೆಯದ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕಾರ್ಯದರ್ಶಿಯ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ಅವರನ್ನು ಕರೆಸಿ ಮುಖ್ಯ ಕಾರ್ಯದರ್ಶಿ ಕೆಲ ಸಲಹೆಗಳನ್ನು ನೀಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಈ ಗುದ್ದಾಟದ ಪರಿಣಾಮ ಕೆಲವು ಹುದ್ದೆಗಳ ಅಧಿಸೂಚನೆ ಪ್ರಕಟಣೆ, ಸಿದ್ಧವಾಗಿರುವ ತಾತ್ಕಾಲಿಕ ಅರ್ಹತಾ ಪಟ್ಟಿ, ಹೆಚ್ಚುವರಿ ಆಯ್ಕೆ ಪಟ್ಟಿಗೆ ಆಯೋಗದ ಅನುಮೋದನೆ ಸಿಕ್ಕಿಲ್ಲ. ಅಲ್ಲದೆ, ಬುಧವಾರ (ಏ. 5) ನಡೆಯಬೇಕಿದ್ದ ಆಯೋಗದ ಸಭೆ ಕೂಡಾ ರದ್ದಾಗಿದೆ.

**ಪತ್ರದಲ್ಲಿ ಏನಿದೆ?:** 'ಆಯೋಗವು ನೇಮಕಾತಿ ಪ್ರಕ್ರಿಯೆ ನಡೆಸುತ್ತದೆ. ಇದಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಗೊಂದಲ ಕಂಡು ಬಂದಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ, ತಿದ್ದುಪಡಿ ಕೋರುವ ಬಗ್ಗೆ ಸಭೆ ನಿರ್ಣಯಿಸುತ್ತದೆ. ಇದನ್ನಾಧರಿಸಿ ಆಯೋಗದ ಕಾರ್ಯದರ್ಶಿ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಯೋಗದ ಗಮನಕ್ಕೆ ತರದೇ, ಆಯೋಗದ ಸಭೆಯಲ್ಲಿ ಚರ್ಚಿಸದ ವಿಷಯದ ಬಗ್ಗೆ ಕಾರ್ಯದರ್ಶಿಯೇ ಆಯೋಗದ ಹೆಸರಿನಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ ಪಡೆಯುತ್ತಿದ್ದಾರೆ' ಎಂದು ಆರೋಪಿಸಲಾಗಿದೆ.

'ಆಯೋಗದ ಸದಸ್ಯರನ್ನು ಒಳಗೊಂಡ ಉಪ ಸಮಿತಿ ರಚಿಸಲು ಒಪ್ಪದೇ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿದೆ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪ ಎಸಗಿದ್ದಾರೆ ಎನ್ನಲಾದ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿದ ಬಳಿಕ ದೋಷ-ಮುಕ್ತರನ್ನಾಗಿಸಿ 2022ರ ನ. 10ರಂದು ಆದೇಶ ಹೊರಡಿಸಿದ್ದರೂ, ಮತ್ತೊಮ್ಮೆ ಇಲಾಖಾ ವಿಚಾರಣೆಗೆ ಮಾರ್ಚ್ 18ರಂದು ಆದೇಶ ಹೊರಡಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಆಯೋಗದ ಅನುಮೋದನೆ ಪಡೆಯದೆ ವೆಬ್‌ಸೈಟ್‌ನಲ್ಲಿ ಪ್ರಕಟಿಸ-ಲಾಗಿದೆ. ಆಯೋಗಕ್ಕೆ ಕಳುಹಿಸಿರುವ ಕಡತಗಳ ಪಟ್ಟಿಯನ್ನೂ ಕಾರ್ಯದರ್ಶಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವುದು ನಿಯಮ ವಿರುದ್ಧವಾಗಿದೆ' ಎಂದೂ ಪತ್ರದಲ್ಲಿದೆ.

'ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಸಂದರ್ಶನ ನಡೆಸುವ ಬಗ್ಗೆ ನಿಯಮಗಳಲ್ಲಿ ಸ್ಪಷ್ಟತೆ ಇದ್ದರೂ, ಸರ್ಕಾರದಿಂದ ಸ್ಪಷ್ಟೀಕರಣ ಕೋರಲಾಗಿದೆ. ಆಯೋಗಕ್ಕೆ ಮಂಜೂರಾಗಿರುವ ಹುದ್ದೆಗಳಿಗೆ ಆಯೋಗದ ಅನುಮೋದನೆ ಪಡೆಯದೇ ಅಧಿಸೂಚನೆ ಜಾರಿ ಮಾಡಿದ್ದಾರೆ. ಈ ಅಂಶಗಳಷ್ಟೇ ಅಲ್ಲದೆ, ಇನ್ನೂ ಹಲವು ವಿಷಯಗಳ ಬಗ್ಗೆ ಕಾರ್ಯದರ್ಶಿಯವರು ಆಯೋಗದ ಅನುಮೋದನೆ ಪಡೆಯದೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕಾರ್ಯದರ್ಶಿ ಸ್ವಯಂ ಆಯೋಗದಂತೆ ಕಾರ್ಯ-ನಿರ್ವಹಿಸುತ್ತಿರುವುದು ನಿಯಮದ ಪ್ರಕಾರ ಸರಿಯಲ್ಲ. ಹೀಗಾಗಿ, ಕಾರ್ಯದರ್ಶಿಯವರಿಂದ ಬರುವ ಪತ್ರಗಳನ್ನು ಪರಿಶೀಲಿಸಿ, ಆಯೋಗದ ಅನುಮೋದನೆ ಪಡೆದಿರುವ ವಿಷಯ-ಗಳಿದ್ದಲ್ಲಿ ಮಾತ್ರ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಕಾರ್ಯದರ್ಶಿಗೆ ಸೂಕ್ತ ತಿಳುವಳಿಕೆ ನೀಡಬೇಕು' ಎಂದೂ ಪತ್ರದಲ್ಲಿದೆ.

CS Scanned with CamScanner

# ಕೆಪಿಎಸ್‌ಸಿ| ಮುಸುಕಿನ ಗುದ್ದಾಟ: ಕಾರ್ಯದರ್ಶಿ ವರ್ತನೆಗೆ ಆಕ್ಷೇಪ, ಸಿಎಸ್‌ಗೆ ದೂರು

ರಾಜೇಶ್ ರೈ ಚಟ್ಲ Updated: 06 ಏಪ್ರಿಲ್ 2023, 08:15 IST

ಅಕ್ಷರ ಗಾತ್ರ : ಆ | ಆ | ಆ




ಕೆಪಿಎಸ್‌ಸಿ

**ಬೆಂಗಳೂರು:** ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿ, ಸಂದರ್ಶನ, ಆಯ್ಕೆ ಪಟ್ಟಿ ಬಿಡುಗಡೆ ಮತ್ತಿತರ ವಿಷಯಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ಮತ್ತು ಆಯೋಗದ ಅಧ್ಯಕ್ಷ, ಸದಸ್ಯರ ಮಧ್ಯೆ ಹಲವು ದಿನಗಳಿಂದ ನಡೆಯುತ್ತಿದ್ದ ಮುಸುಕಿನ ಗುದ್ದಾಟ ಇದೀಗ ರಾಜ್ಯ ಸರ್ಕಾರದ ಅಂಗಳ ತಲುಪಿದೆ.

‘ಕಾರ್ಯದರ್ಶಿ ತಾವೇ ಆಯೋಗ ಎಂಬಂತೆ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂಬ ಆರೋಪ ಹೊರಿಸಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಸದಸ್ಯರು ಮಾರ್ಚ್ 28ರಂದು 49 ಪುಟಗಳ ಪತ್ರ ಬರೆದಿದ್ದಾರೆ. ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಒಂಬತ್ತು ಸದಸ್ಯರು ಪತ್ರಕ್ಕೆ ಸಹಿ ಹಾಕಿದ್ದಾರೆ. ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ ಮತ್ತು ಪ್ರೊ. ರಂಗರಾಜ ಸಹಿ ಹಾಕಿಲ್ಲ. ರಂಗರಾಜ ಅವರು ಅನಾರೋಗ್ಯ ಕಾರಣದಿಂದ ಹಲವು ತಿಂಗಳುಗಳಿಂದ ಆಯೋಗದ ಸಭೆಗಳಿಗೆ ಹಾಜರಾಗಿಲ್ಲ.

ಅಲ್ಲದೆ, ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿದ ಅಧ್ಯಕ್ಷ ಮತ್ತು ಸದಸ್ಯರು, ನೇಮಕಾತಿ ಪ್ರಕ್ರಿಯೆ ಕುರಿತಂತೆ ಅಭ್ಯರ್ಥಿಗಳ ಜೊತೆ ಯೂಟ್ಯೂಬ್ ಸಂವಹನ, ಟ್ವೀಟ್, ಆಯೋಗದ ಅನುಮೋದನೆ ಪಡೆಯದೆ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕಾರ್ಯದರ್ಶಿಯ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ಅವರನ್ನು ಕರೆಸಿ ಮುಖ್ಯ ಕಾರ್ಯದರ್ಶಿ ಕೆಲ ಸಲಹೆಗಳನ್ನು ನೀಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಈ ಗುದ್ದಾಟದ ಪರಿಣಾಮ ಕೆಲವು ಹುದ್ದೆಗಳ ಅಧಿಸೂಚನೆ ಪ್ರಕಟಣೆ, ಸಿದ್ಧವಾಗಿರುವ ತಾತ್ಕಾಲಿಕ ಅರ್ಹತಾ ಪಟ್ಟಿ, ಹೆಚ್ಚುವರಿ ಆಯ್ಕೆ ಪಟ್ಟಿಗೆ ಆಯೋಗದ ಅನುಮೋದನೆ ಸಿಕ್ಕಿಲ್ಲ. ಅಲ್ಲದೆ, ಬುಧವಾರ (ಏ. 5) ನಡೆಯಬೇಕಿದ್ದ ಆಯೋಗದ ಸಭೆ ಕೂಡಾ ರದ್ದಾಗಿದೆ.

**ಪತ್ರದಲ್ಲಿ ಏನಿದೆ?:** ‘ಆಯೋಗವು ನೇಮಕಾತಿ ಪ್ರಕ್ರಿಯೆ ನಡೆಸುತ್ತದೆ. ಇದಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಗೊಂದಲ ಕಂಡು ಬಂದಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ, ತಿದ್ದುಪಡಿ ಕೋರುವ ಬಗ್ಗೆ ಸಭೆ ನಿರ್ಣಯಿಸುತ್ತದೆ. ಇದನ್ನಾಧರಿಸಿ ಆಯೋಗದ ಕಾರ್ಯದರ್ಶಿ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಆಯೋಗದ ಗಮನಕ್ಕೆ ತರದೇ, ಆಯೋಗದ ಸಭೆಯಲ್ಲಿ ಚರ್ಚಿಸದ ವಿಷಯದ ಬಗ್ಗೆ ಕಾರ್ಯದರ್ಶಿಯೇ ಆಯೋಗದ ಹೆಸರಿನಲ್ಲಿ ಸರ್ಕಾರದಿಂದ ಸ್ಪಷ್ಟೀಕರಣ ಪಡೆಯುತ್ತಿದ್ದಾರೆ’ ಎಂದು ಆರೋಪಿಸಲಾಗಿದೆ.

‘ಆಯೋಗದ ಸದಸ್ಯರನ್ನು ಒಳಗೊಂಡ ಉಪ ಸಮಿತಿ ರಚಿಸಲು ಒಪ್ಪದೇ ಸರ್ಕಾರಕ್ಕೆ ಪತ್ರ ಬರೆದು ಸ್ಪಷ್ಟೀಕರಣ ಕೋರಲಾಗಿದೆ. 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪ ಎಸಗಿದ್ದಾರೆ ಎನ್ನಲಾದ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿದ ಬಳಿಕ ದೋಷಮುಕ್ತರನ್ನಾಗಿಸಿ 2022ರ ನ. 10ರಂದು ಆದೇಶ ಹೊರಡಿಸಿದ್ದರೂ, ಮತ್ತೊಮ್ಮೆ ಇಲಾಖಾ ವಿಚಾರಣೆಗೆ ಮಾರ್ಚ್ 18ರಂದು ಆದೇಶ ಹೊರಡಿಸಲಾಗಿದೆ. ಲೋಕೋಪಯೋಗಿ ಇಲಾಖೆಯ ಕಿರಿಯ ಎಂಜಿನಿಯರ್ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಇತರ ಹುದ್ದೆಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಆಯೋಗದ ಅನುಮೋದನೆ ಪಡೆಯದೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಯೋಗಕ್ಕೆ ಕಳುಹಿಸಿರುವ ಕಡತಗಳ ಪಟ್ಟಿಯನ್ನೂ ಕಾರ್ಯದರ್ಶಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವುದು ನಿಯಮ ವಿರುದ್ಧವಾಗಿದೆ’ ಎಂದೂ ಪತ್ರದಲ್ಲಿದೆ.

‘ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಹುದ್ದೆಗಳ ನೇಮಕಾತಿಗೆ ಸಂದರ್ಶನ ನಡೆಸುವ ಬಗ್ಗೆ ನಿಯಮಗಳಲ್ಲಿ ಸ್ಪಷ್ಟತೆ ಇದ್ದರೂ, ಸರ್ಕಾರದಿಂದ ಸ್ಪಷ್ಟೀಕರಣ ಕೋರಲಾಗಿದೆ. ಆಯೋಗಕ್ಕೆ ಮಂಜೂರಾಗಿರುವ ಹುದ್ದೆಗಳಿಗೆ ಆಯೋಗದ ಅನುಮೋದನೆ ಪಡೆಯದೇ ಅಧಿಸೂಚನೆ ಜಾರಿ ಮಾಡಿದ್ದಾರೆ. ಈ ಅಂಶಗಳಷ್ಟೇ ಅಲ್ಲದೆ, ಇನ್ನೂ ಹಲವು ವಿಷಯಗಳ ಬಗ್ಗೆ ಕಾರ್ಯದರ್ಶಿಯವರು ಆಯೋಗದ ಅನುಮೋದನೆ ಪಡೆಯದೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕಾರ್ಯದರ್ಶಿ ಸ್ವಯಂ ಆಯೋಗದಂತೆ ಕಾರ್ಯನಿರ್ವಹಿಸುತ್ತಿರುವುದು ನಿಯಮದ ಪ್ರಕಾರ ಸರಿಯಲ್ಲ. ಹೀಗಾಗಿ, ಕಾರ್ಯದರ್ಶಿಯವರಿಂದ ಬರುವ ಪತ್ರಗಳನ್ನು ಪರಿಶೀಲಿಸಿ, ಆಯೋಗದ ಅನುಮೋದನೆ ಪಡೆದಿರುವ ವಿಷಯಗಳಿದ್ದಲ್ಲಿ ಮಾತ್ರ ಕ್ರಮ ಕೈಕೊಳ್ಳಬೇಕು. ಅಲ್ಲದೆ, ಕಾರ್ಯದರ್ಶಿಗೆ ಸೂಕ್ತ ತಿಳುವಳಿಕೆ ನೀಡಬೇಕು’ ಎಂದೂ ಪತ್ರದಲ್ಲಿದೆ.

*

ನೇಮಕಾತಿ ಪ್ರಕ್ರಿಯೆಗಳಲ್ಲಿ ಅಭ್ಯರ್ಥಿಗಳಲ್ಲಿ ವಿಶ್ವಾಸ ಮೂಡಿಸಲು ಮತ್ತು ಅವರ ಒಳಿತಿಗೆ ಪೂರಕವಾಗಿ ನಾನು ಕರ್ತವ್ಯನಿರ್ವಹಿಸುತ್ತಿದ್ದೇನೆ.

***–ಸುರಳ್ಕರ್ ವಿಕಾಸ್ ಕಿಶೋರ್, ಕಾರ್ಯದರ್ಶಿ, ಕೆಪಿಎಸ್‌ಸಿ***

*

ಇದು ಆಯೋಗದ ಆಂತರಿಕ ವಿಷಯ. ಆಯೋಗದ ವಿಷಯಗಳನ್ನು ಮಾಧ್ಯಮಕ್ಕೆ ಕೊಡುವುದಾಗಲಿ, ನೀವು ಕೇಳುವುದಾಗಲಿ ಸರಿ ಇರಲ್ಲ.

***–ಶಿವಶಂಕರಪ್ಪ ಎಸ್. ಸಾಹುಕಾರ್ ಅಧ್ಯಕ್ಷ, ಕೆಪಿಎಸ್‌ಸಿ***